## ಮಧ್ಯಂತರ ಅರ್ಜಿ ಸಂಖ್ಯೆ - 03 ರ ಕುರಿತಾಗಿ ಆದೇಶ

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ-03 ನ್ನು ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಪೂರಕವಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದಿಸಿರುವ ಅರ್ಜಿದಾರರನ್ನು ಪ್ರಸ್ತಾವಿತ ಪ್ರತಿವಾದಿ-2 ರವರನ್ನಾಗಿ ಈ ಪ್ರಕರಣದಲ್ಲಿ ಸೇರ್ಪಡೆ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**2. ಅರ್ಜಿದಾರರು ಸದರಿ ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಗಿನಂತೆ ಇವೆ :**

ಪ್ರತಿವಾದಿಯಾದ ದಾಸಪ್ಪ ರವರು ತನ್ನ ಸ್ವಂತ ತಂದೆಯಾಗಿದ್ದು, ತನ್ನನ್ನು ತನ್ನ ತಂದೆಯ ಹಿರಿಯ ಸಹೋದರನಾದ ಡಿ. ರಂಗಯ್ಯರವರಿಗೆ ದತ್ತು ನೀಡಿದ್ದರು. ಸದರಿ ದಾಸಪ್ಪ ಮತ್ತು ರಂಗಯ್ಯರವರು ಮೃತಪಟ್ಟಿರುತ್ತಾರೆ. ಮೃತ ಡಿ. ದಾಸಪ್ಪರವರು ಅವರ ಜೀವಿತ ಅವಧಿಯಲ್ಲಿ ಸದರಿರವರ ಹಿಸ್ಸೆಯ ಸ್ವತ್ತುಗಳ ಕುರಿತಾಗಿ ತನ್ನ ಹೆಸರಿಗೆ ಮರಣಶಾಸನ ಪತ್ರವನ್ನು ಜಾರಿಮಾಡಿಕೊಟ್ಟು ತನಗೆ ಸ್ವತ್ತನ್ನು ನೀಡಿರುತ್ತಾರೆ. ಹಾಗಾಗಿ ತಾನು ಈ ಪ್ರಕರಣದಲ್ಲಿ ಅಗತ್ಯ ಪಕ್ಷಗಾರನಾಗಿರುತ್ತೇನೆ. ತನಗೆ ದಾವಾ ಅನುಸೂಚಿತ ಸ್ವತ್ತುಗಳ ಕುರಿತಾಗಿ ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಸ್ವಾಧೀನತೆಯ ಹಕ್ಕು ಇರುತ್ತದೆ. ಪ್ರಸ್ತುತ ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವ್ಯಾಜ್ಯಗಳ ಬಾಹುಳ್ಯತೆಗೆ ಕಾರಣವಾಗುತ್ತದೆ. ಈ ಅರ್ಜಿಯನ್ನು ಪುರಸ್ಕರಿಸುವುದರಿಂದ ಯಾವುದೇ ಹಾನಿ ಉಂಟಾಗುವುದಿಲ್ಲ. ಆದ್ದರಿಂದ ಪ್ರಸ್ತುತ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

**3. ಮೇಲ್ಕಂಡ ಮಧ್ಯಂತರ ಅರ್ಜಿಗೆ ವಾದಿ ಪರ ವಕೀಲರು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಲ್ಲಿನ ಅಂಶಗಳು ಈ ಕೆಳಕಂಡಂತಿದೆಃ-**

ವಾದಿಯು ಸಲ್ಲಿಸಿರುವ ಅರ್ಜಿಯು ಕಾನೂನಿನ ಅಡಿಯಲ್ಲಾಗಲೀ ವಾಸ್ತವಿಕತೆಯ ಅಡಿಯಲ್ಲಾಗಲೀ ಊರ್ಜಿತವಾಗುವುದಿಲ್ಲ. ಅರ್ಜಿಗೆ ಪೂರಕವಾಗಿ ಸುಳ್ಳು ಅಂಶಗಳನ್ನು

ನಮೂದು ಮಾಡಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಅರ್ಜಿದಾರರು ದಾವಾ ಅನುಸೂಚಿತ ಸ್ವತ್ತುಗಳಿಗೆ ಯಾವುದೇ ರೀತಿಯಲ್ಲೂ ಸಂಬಂಧ ಹೊಂದಿರುವುದಿಲ್ಲ. ಪ್ರಕರಣವನ್ನು ಮುಂದೂಡುವ ಸಲುವಾಗಿ ಮತ್ತು ಪ್ರಕರಣಕ್ಕೆ ವಿಳಂಬವನ್ನುಂಟುಮಾಡಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ತಾನು ಈ ದಾವೆಯನ್ನು ಡಿ. ದಾಸಪ್ಪರವರ ವಿರುದ್ದ ಸಲ್ಲಿಸಿದ್ದು, ದಾವೆಯು ವಿಚಾರಣೆಗಾಗಿ ಬಾಕಿ ಇದ್ದ ಕಾಲಕ್ಕೆ ಸದರಿ ಡಿ. ದಾಸಪ್ಪರವರು ದಿನಾಂಕ:20.01.2018 ರಂದು ಮೃತಪಟ್ಟಿದ್ದು, ಆತನ ಓರ್ವನೆ ಮಗನಾದ ಡಾ: ಎಂ.ಡಿ. ಶ್ರೀನಿವಾಸ ಮೂರ್ತಿರವರನ್ನು ದಾವೆಯಲ್ಲಿ ಸೇರ್ಪಡೆ ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ದಾಸಪ್ಪರವರ ಕಾನೂನುಬದ್ದ ವಾರಸುದಾರರಾಗಿ ಡಾ: ಎಂ. ಡಿ. ಶ್ರೀನಿವಾಸ ಮೂರ್ತಿರವರು ಈ ದಾವೆಯಲ್ಲಿ ಸೇರ್ಪಡೆಯಾಗಿದ್ದು, ಸದರಿ ರವರು ಪ್ರತಿವಾದ ಪತ್ರವನ್ನು ಕೂಡ ಸಲ್ಲಿಸಿರುತ್ತಾರೆ. ಮೃತ ಡಿ ದಾಸಪ್ಪರವರು ಅನಾರೋಗ್ಯದಿಂದ ಬಳಲುತ್ತಿದ್ದು, ಆತನಿಗಿಂತ ಪೂರ್ವದಲ್ಲಿಯೇ ಆತನ ಪತ್ನಿ ಮೃತಪಟ್ಟಿದ್ದರು. ಅರ್ಜಿದಾರರು ಸದರಿ ದಾಸಪ್ಪರವರ ನೈಸರ್ಗಿಕ ಮಗನಾಗಿದ್ದು, ಮೃತ ದಾಸಪ್ಪರವರ ಅನಾರೋಗ್ಯದ ಕಾರಣಗಳನ್ನು ಬಳಸಿಕೊಂಡು ಸದರಿ ಮರಣಶಾಸನ ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆ. ಸದರಿ ಮರಣಶಾಸನ ಪತ್ರವು ಸಂಶಯಾಸ್ಪದದಿಂದ ಕೂಡಿದ್ದು, ಸದರಿ ಮರಣ ಶಾಸನ ಪತ್ರವನ್ನು ಪರಿಗಣಿಸಲು ಬರುವುದಿಲ್ಲ. ಅಂತೆಯೇ ಸದರಿ ಮರಣಶಾಸನ ಪತ್ರವು ಕಾನೂನಿನ ಪ್ರಕ್ರಿಯೆಯ ಪ್ರಕಾರ ಜಾರಿಗೊಂಡಿರುವುದಿಲ್ಲ. ಹಾಗಾಗಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. **ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ:**

1) ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ - 02 ರಲ್ಲಿ ಉಲ್ಲೇಖಿಸಿರುವಂತೆ ಪ್ರಸ್ತಾವಿತ ಪ್ರತಿವಾದಿ 2 ರವರನ್ನು ಸೇರ್ಪಡೆ ಮಾಡಬೇಕೆಂದು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ?

2) ಹಾಗಿದ್ದಲ್ಲಿ ಯಾವ ಆದೇಶ?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:-

ಅಂಶ – 1 : ಸಕಾರಾತ್ಮಕವಾಗಿ,

ಅಂಶ – 2 : ಅಂತಿಮ ಆದೇಶದಂತೆ,

**ಕಾ ರ ಣ ಗ ಳು**

7. **ಅಂಶ – 1** : ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ಪರಿಹಾರವನ್ನು ಮತ್ತು ಅದಕ್ಕೆ ಪೂರಕವಾಗಿ ಸ್ವಾಧೀನತೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯು ಸಲ್ಲಿಸಿರುವ ವಾದಪತ್ರ, ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರ, ಮಧ್ಯಂತರ ಅರ್ಜಿ, ಸದರಿ ಅರ್ಜಿಗೆ ಸಲ್ಲಿಸಿರುವ ತಕರಾರು ಹಾಗೂ ಕಡತದಲ್ಲಿನ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

8. ಅರ್ಜಿದಾರರ ಪರ ವಕೀಲರು ಪ್ರಸ್ತುತ ಮಧ್ಯಂತರ ಅರ್ಜಿಯ ಕುರಿತು ಅರ್ಜಿದಾರರು ಪ್ರತಿವಾದಿಯಾದ ಮೃತ ಡಿ. ದಾಸಪ್ಪರವರ ನೈಸರ್ಗಿಕ ಮಗನಾಗಿದ್ದು, ಅರ್ಜಿದಾರರನ್ನು ಪ್ರತಿವಾದಿಯ ಹಿರಿಯ ಸಹೋದರನಾದ ಡಿ. ರಂಗಯ್ಯರವರಿಗೆ ದತ್ತು ನೀಡಿದ್ದು, ಆದಾಗ್ಯೂ ಕೂಡ ಮೃತ ಪ್ರತಿವಾದಿಯು ವಾದಿಗೆ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಮರಣಶಾಸನ ಪತ್ರವನ್ನು ಜಾರಿಮಾಡಿದ್ದು, ಹಾಗಾಗಿ ಅರ್ಜಿದಾರರಿಗೆ ದಾವಾ ಅನುಸೂಚಿತ ಸ್ವತ್ತುಗಳ ಕುರಿತಾಗಿ ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಸ್ವಾಧೀನತೆಯ ಹಕ್ಕು ಇದ್ದು, ಆದ್ದರಿಂದ ಅರ್ಜಿದಾರರನ್ನು 2 ನೇ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಬೇಕೆಂದು ಕೋರಿರುತ್ತಾರೆ. ಇದಕ್ಕೆ ಪ್ರತಿಯಾಗಿ ವಾದಿ ಪರ ವಕೀಲರು ಮೃತ ಪ್ರತಿವಾದಿಯಾದ ಡಿ. ದಾಸಪ್ಪರವರ ಓರ್ವರೆ ಕಾನೂನುಬದ್ದ ವಾರಸುದಾರರು ಮಧ್ಯಂತರ ಅರ್ಜಿಯನ್ನು ಸಲ್ಲಿಸುವ ಮೂಲಕ ಸೇರ್ಪಡೆ ಮಾಡಿದ್ದು, ಹಾಗಾಗಿ ಅರ್ಜಿಯಲ್ಲಿ ನಮೂದಿಸಿರುವ ಪಕ್ಷಗಾರರನ್ನು ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡುವ ಅಗತ್ಯತೆ ಇಲ್ಲ ಎಂದು ಹೇಳಿರುತ್ತಾರೆ. ಅಂತೆಯೇ ಈಗಾಗಲೇ ಮೃತ ಪ್ರತಿವಾದಿಯ ಕಾನೂನುಬದ್ದ ವಾರಸುದಾರರು ಈ ದಾವೆಯಲ್ಲಿ ಸೇರ್ಪಡೆಯಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಹಾಗಾಗಿ ಪ್ರಸ್ತುತ ಈ ಹಂತದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಅರ್ಜಿದಾರರನ್ನು 2 ನೇ ಪ್ರತಿವಾದಿಯಾಗಿ ಸೇರ್ಪಡೆ ಮಾಡುವ ಅಗತ್ಯತೆ ಇಲ್ಲದ ಕಾರಣ, ಸದರಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು

ವಜಾಗೊಳಿಸುವಂತೆ ಕೋರಿರುತ್ತಾರೆ. ಅಂತಿಮವಾಗಿ ಪ್ರಸ್ತಾವಿತ ಪ್ರತಿವಾದಿಯು ಹೇಳಿರುವಂತೆ ಮೃತ ಡಿ. ದಾಸಪ್ಪರವರು ಮರಣಶಾಸನ ಪತ್ರವನ್ನು ಜಾರಿಮಾಡಿಕೊಟ್ಟಿರುವುದಿಲ್ಲ ಎಂದು, ಬದಲಾಗಿ ಪ್ರಸ್ತಾವಿತ ಪ್ರತಿವಾದಿಯು ಸದರಿ ಮರಣ ಶಾಸನ ಪತ್ರವನ್ನು ಸೃಷ್ಟಿಸಿಕೊಂಡಿದ್ದು, ಸದರಿ ದಾಖಲಾತಿಯು ಕಾನೂನುನಿನ ಪ್ರಕ್ರಿಯೆಯ ಮೂಲಕ ಜಾರಿಗೊಂಡಿರುವುದಿಲ್ಲ ಎಂದು, ಬದಲಾಗಿ ಮರಣಶಾಸನ ಪತ್ರವು ಸಂಶಯಾಸ್ಪದದಿಂದ ಕೂಡಿದ್ದು, ಹಾಗಾಗಿ ಸದರಿ ಮರಣಶಾಸನ ಪತ್ರದ ಆಧಾರದಲ್ಲಿ ಅರ್ಜಿದಾರರನ್ನು ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲು ಬರುವುದಿಲ್ಲ ಎಂದು ವಾದವನ್ನು ಮಂಡಿಸಿರುತ್ತಾರೆ.

9. ಉಭಯ ಪಕ್ಷಗಾರರ ಹೇಳಿಕೆಯನ್ನು ಪರಿಶೀಲಿಸಲಾಗಿ ಈ ಕುರಿತಾಗಿ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2)ನ್ನು ಪರಿಶೀಲಿಸುವುದು ಮುಖ್ಯವಾಗಿರುತ್ತದೆ. ಸದರಿ ಕಾನೂನಿನ ಪರಿಕಲ್ಪನೆಯು ಈ ಕೆಳಕಂಡಂತೆ ಇದೆ :

> "Court may strike out or add parties:- The Court may at any stage of the proceedings, either upon or without the application of either party, and on such terms as any appear to the Court to be just, order that the name of any party improperly joined, whether as plaintiff or defendant, be struck out, and that the name of any person who ought to have been joined, whether as plaintiff or defendant, or whose presence before the Court may be necessary in order to enable the Court effectually and completely to adjudicate upon and settle all the questions involved in the suit, be added".

10. ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಯಾವುದೇ ಒಂದು ಪ್ರಕರಣವನ್ನು ಪರಿಣಾಮಕಾರಿಯಾಗಿ, ಸಂಪೂರ್ಣವಾಗಿ ಹಾಗೂ ಎಲ್ಲಾ ವಿವಾದಾಂಶಗಳ ಕುರಿತು ಪರಿಪೂರ್ಣ ವಿಚಾರಣೆಯನ್ನು ನಡೆಸಲು ಅವಶ್ಯಕ ಪಕ್ಷಗಾರರ ಸೇರ್ಪಡೆ ಇದೆ ಎಂದು ನ್ಯಾಯಾಲಯಕ್ಕೆ ಕಂಡುಬಂದಲ್ಲಿ ಅಂತಹ ಪಕ್ಷಗಾರರನ್ನು ದಾವೆಯಲ್ಲಿ ಸೇರ್ಪಡೆ ಮಾಡಬಹುದು ಎಂದು ಉಲ್ಲೇಖಿಸಿರುತ್ತದೆ.

11. ಈ ಮೇಲ್ಕಂಡ ಕಾನೂನಿನ ಪ್ರಕ್ರಿಯೆಯನ್ನು ಪರಿಶೀಲಿಸಲಾಗಿ ಪ್ರಸ್ತುತ ಈ ಪ್ರಕರಣದಲ್ಲಿ ವಾದಿಯು ಪ್ರತಿವಾದಿಯ ವಿರುದ್ಧ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಘೋಷಣಾತ್ಮಕ ಪರಿಹಾರಕ್ಕೆ ಪೂರಕವಾಗಿ ಸ್ವಾಧೀನತೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಈ ಪ್ರಕರಣದ ಪ್ರತಿವಾದಿಯು ದಾವೆಯು ವಿಚಾರಣೆಗಾಗಿ ಬಾಕಿ ಇದ್ದ ಕಾಲಕ್ಕೆ ದಿನಾಂಕಃ20.01.2018 ರಂದು ಮೃತಪಟ್ಟಿದ್ದು, ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ಸಲ್ಲಿಸಿ, ಪ್ರತಿವಾದಿಯ ಕಾನೂನುಬದ್ದ ವಾರಸುದಾರರನ್ನು ಸೇರ್ಪಡೆ ಮಾಡಿರುವುದು ಕಂಡು ಬರುತ್ತದೆ. ತದನಂತರದಲ್ಲಿ ಪ್ರತಿವಾದಿಯ ಕಾನೂನುಬದ್ದ ವಾರಸುದಾರರು ನ್ಯಾಯಾಲಯದಲ್ಲಿ ದಿನಾಂಕ 09.03.2018 ರಂದು ಪ್ರತಿವಾದ ಪತ್ರವನ್ನು ಸಲ್ಲಿಸಿ, ವಾದಿಯು ಸಲ್ಲಿಸಿರುವಂತಹ ದಾವೆಯನ್ನು ಡಿಕ್ರಿ ಮಾಡಬಹುದು ಎಂದು ಉಲ್ಲೇಖಿಸಿರುವುದು ಕಂಡು ಬರುತ್ತದೆ. ಅರ್ಜಿದಾರರು ಅರ್ಜಿಗೆ ಪೂರಕವಾಗಿ ದಿನಾಂಕ 16.01.2018 ರ ಮರಣಶಾಸನ ಪತ್ರದ ನೋಟರಿ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಯನ್ನು ಪರಿಶೀಲಿಸಲಾಗಿ ಮೃತ 1 ನೇ ಪ್ರತಿವಾದಿಯಾದ ಡಿ. ದಾಸಪ್ಪರವರು ಪ್ರಸ್ತಾವಿತ ಪ್ರತಿವಾದಿಯಾದ ಡಾಃ ಆರ್ ಶೇಷಾದ್ರಿರವರ ಹೆಸರಿಗೆ ದಾವಾ ಅನುಸೂಚಿತ ಸ್ವತ್ತುಗಳ ಕುರಿತಾಗಿ ಮರಣಶಾಸನ ಪತ್ರವನ್ನು ಜಾರಿಮಾಡಿಕೊಟ್ಟಿರುವುದು ಕಂಡು ಬರುತ್ತದೆ. ಸದರಿ ಮರಣ ಶಾಸನ ಪತ್ರವನ್ನು ಪರಿಗಣಿಸುವ ಕುರಿತು ಸಾಕ್ಷ್ಯದ ನಂತರದಲ್ಲಿ ನಿರ್ಣಯವನ್ನು ನೀಡಬೇಕಾಗುತ್ತದೆ. ಅದನ್ನು ಹೊರತುಪಡಿಸಿ ಈ ಹಂತದಲ್ಲಿ ಮರಣಶಾಸನ ಪತ್ರದ ಕುರಿತಾಗಿ ಯಾವುದೇ ನಿರ್ಣಯವನ್ನು ನೀಡಲು ಬರುವುದಿಲ್ಲ. ಹಾಗಾಗಿ ದಿನಾಂಕ 16.01.2018 ರ ಮರಣಶಾಸನ ಪತ್ರವನ್ನು ಕಾನೂನು ಪ್ರಕ್ರಿಯೆಯ ಮೂಲಕ ಸಾಬೀತುಪಡಿಸುವ ನಿಬಂಧನೆಗೊಳಪಟ್ಟು, ಪ್ರಸ್ತಾವಿತ ಪ್ರತಿವಾದಿಯನ್ನು 2 ನೇ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡುವ ಕುರಿತಾಗಿ ಪರಿಗಣಿಸಲಾಗುತ್ತದೆ. ಈ ಅಂಶಗಳನ್ನು ಪರಿಗಣಿಸಿದಾಗ ಪ್ರಸ್ತಾವಿತ ಪ್ರತಿವಾದಿಯು ದಾವೆಯ ಪರಿಪೂರ್ಣ ವಿಚಾರಣೆಗೆ ಅಗತ್ಯ ಪಕ್ಷಗಾರರಾಗಿ ಕಂಡು ಬರುತ್ತಾರೆ. ಹಾಗಾಗಿ ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 03 ರಲ್ಲಿನ ಪ್ರಸ್ತಾವಿತ ಪ್ರತಿವಾದಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡುವ ಅಗತ್ಯತೆ ಇದೆ ಎಂದು ತೀರ್ಮಾನಕ್ಕೆ ಬರಲಾಗಿದೆ. ಆದ್ದರಿಂದ ಈ ಮೇಲ್ಕಂಡ ವಿಸ್ತೃತ ಚರ್ಚೆಯಿಂದಾಗಿ ಅಂಶ 1 ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

12. **ಅಂಶ – 2** ಃಮೇಲ್ಕಾಣಿಸಿದ ಎಲ್ಲಾ ಕಾರಣಗಳ ಮೇಲಿಂದಾಗಿ ಈ ಕೆಳಕಾಣಿಸಿದಂತೆ ಆದೇಶಿಸಿರುತ್ತೇನೆ ಃ

## ಆ ದೇ ಶ

ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-03 ನ್ನು ಪುರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

ಪ್ರಕರಣವನ್ನು ದಿನಾಂಕ 30.06.2021 ಕ್ಕೆ ವಾದ ಪತ್ರದ ತಿದ್ದುಪಡಿಗಾಗಿ ಮತ್ತು ತಿದ್ದುಪಡಿ ವಾದ ಪತ್ರ ಸಲ್ಲಿಸಲು ನಿಗದಿಪಡಿಸಿ ಮುಂದೂಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 02 ನೇ ಜೂನ್ 2021 ರಂದು ನಾನು ಉದ್ಘೋಷಿಸಿದ್ದೇನೆ.)

ಪ್ರಭಾರ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕಡೂರು.